ತಾರೀಖು 2ನೇ ಜುಲೈ 1903ನೇ ಇಸವಿ.

ಶಿಡ್ಲಗಟ್ಟದ ತಾಲ್ಲೂಕು ಜಂಗಂಕೋಟೆ ಹೋಬಳೀಗೆ ಸೇರಿದ ಕಾಯಂಗುತ್ತಾ ಕರಿಯನಪುರ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕಿಗೋಸ್ಕರವಾಗಿ, ತಾಲ್ಲೂಕು ಅಮಲ್ದಾರ್ ಕಛೇರಿಯಲ್ಲಿ 1903ನೇ ಇಸವಿ ಸೆಪ್ಟಂಬರ್ ಮಾಹೆ 1ನೇ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

(ಹೆಚ್ಚು ತಪಶೀಲ್ ಬಗ್ಗೆ 16—7—1903ನೇ ಮಾರ್ಕ್ಹಂ 28ನೇ ನಂಬರ್ ಮೈಸೂರ ಗೆಜೆಟ್ಟಿನ IIನೇ ಭಾಗದ 372-373ನೇ ನಂಬರ್ ಪೇಜು ನೋಡತಕ್ಕದ್ದು.)

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ್.

ತಾರೀಖು 2ನೇ ಜುಲೈ 1903ನೇ ಇಸವಿ.

ಶಿಡ್ಲಗಟ್ಟದ ತಾಲ್ಲೂಕು ಜಂಗಂಕೋಟೆ ಹೋಬಳೀಗೆ ಸೇರಿದ ಕಾಯಂಗುತ್ತಾ ಚಿಕ್ಕಬಲ್ಲ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ, ಆ ತಾಲ್ಲೂಕು ಅಮಲ್ದಾರ್ ಕಛೇರಿಯಲ್ಲಿ 1903ನೇ ಇಸವಿ ಸೆಪ್ಟಂಬರ್ ಮಾಹೆ 1ನೇ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

(ಹೆಚ್ಚು ತಪಶೀಲು ಬಗ್ಗೆ 16—7—1903ನೇ ಮಾರ್ಕ್ಹಂ 28ನೇ ನಂಬರ್ ಮೈಸೂರ ಗೆಜೆಟ್ಟಿನ IIನೇ ಭಾಗದ 374ನೇ ನಂಬರ್ ಪೇಜು ನೋಡತಕ್ಕದ್ದು.)

ತಾರೀಖು 24ನೇ ಜೂನ್ 1903.

ಕೋಲಾರ ತಾಲ್ಲೂಕಿಗೆ ಸೇರಿದ ಕಾಯಂಗುತ್ತಾ ರಾಮಾಪುರದ ಗ್ರಾಮವು ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ ಕೋಲಾರ ತಾಲ್ಲೂಕು ಅಮಲ್ದಾರ್ರವರ ಕಛೇರಿಯಲ್ಲಿ 1903ನೇ ಇಸವಿ ಆಗಸ್ಟ್ 11ನೇ ತಾರೀಖಿನಲ್ಲು ಬಹಿರಂಗವಾಗಿ ಹರಾಜು ಮಾಡಲ್ಪಡುತ್ತದೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲು ಬಗ್ಗೆ 16—7—1903ನೇ ಮಾರ್ಕ್ಹಂ 28ನೇ ನಂಬರ್ ಗೆಜೆಟ್ಟಿನ IIನೇ ಭಾಗದ 371-372ನೇ ನಂಬರ್ ಪೇಜು ನೋಡತಕ್ಕದ್ದು.

ಎಚ್. ದಾಸಪ್ಪ,
ಫಾರ್ ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 9ನೇ ಜುಲೈ 1903.

ಇದರಿಂದ ಸಮಸ್ತ ಜನರಿಗು ತಿಳಿಯಪಡಿಸುವದೇನಂದರೆ—ಹೊಳೆ ನರಸೀಪುರದಲ್ಲಿ ಹೇಮಾವತಿ ನದಿಗೆ ಸೇತುವೆ ಕಟ್ಟಿಸಿ ಹೊಸ ರಸ್ತೆ ಹಾಕಿದ ಸಂದರ್ಭದಲ್ಲಿ ಸರಕಾರಿ ರಸ್ತೆಗೋಸ್ಕರ ಇದೆ ವರ್ಷನಲ್ಲಿ ದೊಣ್ಣೆಯ್ಯನ ಜಂಗವು ಮಠವೆಂಬ—ಪೂರ್ವಕ್ಕೆ—ನಂಜಪ್ಪನ ಸರ್ವೆ 94ನೇ ಪೈಕಿ ಹೊಲ, ಪಶ್ಚಿಮಕ್ಕೆ—ಸರ್ವೆ 95ನೇ ಹೊಲ, ದಕ್ಷಿಣಕ್ಕೆ—ಹಾಸನದ ರಸ್ತೆ, ಉತ್ತರಕ್ಕೆ—ಕೆಳು ನಾಲೆ—ಈ ಮಧ್ಯೆ ಪೂರ್ವ ಪಶ್ಚಿಮ ಗಜ 40, ದಕ್ಷಿಣೋತ್ತರ ಗಜ 60, ಸಲೆ ಗಜ 2400 ವುಳ್ಳ ಪಾಳು ಜಾಗಾ ಪೈಕಿ ಸರಕಾರಕ್ಕೆ ತೆಗದುಕೊಂಡ 1815 ಗಜ ವುಳ್ಳ ಜಾಗಾಕ್ಕೆ ಮಾಲೀಕರಿಗೆ ಪಾವತಿಯಾಗಲು 12 ಹನ್ನೆರಡು ರೂಪಾಯಿ ಕ್ಯಾಂಪ್ ಸೇರ್ಷ ಗೊತ್ತಾಗಿ ಸದರೀ ಮಠದ ಜಾಗಾಕ್ಕೆ ವಾರಸುದಾರು ನಿರ್ಧರ ಪಡದೆ ಬಾಕಿಯಲ್ಲಿರುತ್ತೆ. ಮೇಲ್ಕಂಡ ಪಾಳು ಜಾಗಾವು ಯಾರ ಸ್ವಾಧೀನದಲ್ಲಿದ್ದು ಸದರೀ ಕ್ಯಾಂಪ್ ಸೇರ್ಷ ಮೊಬಲಗ್ಗೆ ಹಕ್ಕುದಾರು ಯಾರೋ ಅವರು ತಮ್ಮ ಹಕ್ಕನ್ನು ತಕ್ಕ ಕೋರ್ಟಿನಲ್ಲಿ ಸ್ಥಿರಪಡಿಸಿಕೊಂಡು ಆ ಕೋರ್ಟು ಸರ್ಟಿಫಿಕೇಟನ್ನು ಈ ನೋಟೀಸು ಗೆಜೆಟ್ಟಿನಲ್ಲಿ ಪ್ರಾಯಿಷಾದ ತಾರೀಖು ಲಾಗಾಯಿತು 6 ಆರು ತಿಂಗಳ ವಳಗಾಗಿ ನಮ್ಮಲ್ಲಿ ಹಾಜರ್ಪಡಿಸಿದಲ್ಲಿ ಅಂಥಾವರಿಗೆ ಕ್ಯಾಂಪ್ ಸೇರ್ಷ ಮೊಬಲಗು ಪಾವತಿ ಮಾಡಿಸುತ್ತೆ. ಇದಕ್ಕೆ ತಪ್ಪಿದಲ್ಲಿ ಮೇಲ್ಕಂಡ ಮೊಬಲಗು ಯಾರಿಗೂ ಸಿಕ್ಕಲಾರದು.

ಡಿ. ದೇವರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟ್.

1903ನೇ ಇಸವಿ ಜೂನ್ ಮಾಹೆ ತಾರೀಖು 27ನೇ ಶನಿವಾರ ಶಿವಮೊಗ್ಗದಲ್ಲಿ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಆಫೀಸಿನಲ್ಲಿ ನಡೆದ ಡಿಸ್ಟ್ರಿಕ್ಟ್ ಫಂಡು ಬೋರ್ಡು ಮೀಟಿಂಗ್ ಪ್ರೊಸೀಡಿಂಗ್ಸ್ ಯಾನೆ ನಡವಳಿಕೆಗಳು.

ಹಾಜರು.

ಉದ್ಯೋಗತಃ ಮೆಂಬರುಗಳು.

ಮೆ|| ಕೆ. ಪಿ. ಪುಟ್ಟಣ್ಣ ಶೆಟ್ಟರವರು, ಡೆಪ್ಯುಟಿ ಕಮ್ಮಿಷನರ್ ಮತ್ತು ಪ್ರೆಸಿಡೆಂಟರವರು, (ಸಭಾಧ್ಯಕ್ಷರು).
1. ,, ಕೆ. ಪ್ರಹ್ಲಾದರಾಯರವರು, ಎಗ್ಸಿಕ್ಯೂಟಿವ್ ಇಂಜಿನಿಯರವರು.
2. ,, ಸಿ. ಎಸ್. ಬಾಲಸುಂದರಮ್ಮಯ್ಯರವರು, ಸಾಗರ ಸಬ್ ಡಿವೀಜನ್ ನಲ್ಲಿ ಇರುವ ಅಸಿಸ್ಟೆಂಟ್ ಕಮಿಷನರವರು.

3. ಮೆ॥ ಡಬ್ಬಿಯು. ಶ್ರೀನಿವಾಸಯ್ಯಂಗಾರ್ಯವರು, ಶಿವಮೊಗ್ಗ ಸಿವಿಲ್ ಆಸ್ಪತ್ರೆ ಇ೯ಚಾರ್ಜ್ ಅಸಿಸ್ಟೆಂಟ್ ಸರ್ಜ್ಜರವರು.
4. ,, ಟಿ. ಜೊಕ್ಕಣ್ಣನವರು, 2ನೇ ಅಸಿಸ್ಟೆಂಟ್ ಕಮಿಷ್ಮರವರು.
5. ,, ಟಿ. ಕೆ. ಲಕ್ಷ್ಮಣ ಐಯ್ಯರ್ಯವರು, ಶಿವಮೊಗ್ಗ ತಾಲ್ಲೂಕು ಅಮಲ್ದಾರ್.
6. ,, ಎಸ್. ಕೃಷ್ಣಯ್ಯರ್ಯವರು, ಚನ್ನಗಿರಿ ತಾಲ್ಲೂಕು ಅಮಲ್ದಾರ್.
7. ,, ಕೆ. ಆರ್. ಸುಬ್ಬರಾವ್, ಶಿಕಾರಿಪುರ ತಾಲ್ಲೂಕು ಅಮಲ್ದಾರ್.
8. ,, ಎಸ್. ಕೃಷ್ಣಪ್ಪ, ಸೊರಬ ತಾಲ್ಲೂಕು ಅಮಲ್ದಾರ್.
9. ,, ಜಿ. ಹನುಮಂತರಾವ್, ಸಾಗರದ ತಾಲ್ಲೂಕು ಅಮಲ್ದಾರ್.
10. ,, ಬಿ. ಎಸ್. ರಾಜೋಜಿರಾವ್, ನಗರದ ತಾಲ್ಲೂಕು ಅಮಲ್ದಾರ್.
11. ,, ಎಸ್. ವೆಂಕಟರಮಣ ಶ್ರೌತಿ, ತೀರ್ಥಹಳ್ಳಿ ತಾಲ್ಲೂಕು ಅಮಲ್ದಾರ್.

ನೋಟ್—ಕುಂಸಿ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಮೆ॥ ಹೆಚ್. ಕೇಶವಾಚಾರ್ ಸಹ ಹಾಜರಾಗಿ ಇದ್ದರು.

ಉದ್ಯೋಗಸ್ಥರಲ್ಲದ ಮೆಂಬರುಗಳು.

1. ಮೆ॥ ಸಿ. ಚನ್ನಬಸಪ್ಪನವರು, ಶಿವಮೊಗ್ಗ ತಾಲ್ಲೂಕು.
2. ,, ಕೆ. ಅನಂತರಾವ್ಯೆಯ್ಯಂಗಾರು, ಚನ್ನಗಿರಿ ತಾಲ್ಲೂಕು.
3. ,, ಸಿ. ಗೋಪಾಲಪ್ಪನವರು, ಹೊನ್ನಾಳಿ ತಾಲ್ಲೂಕು.
4. ,, ಹೊಸಬಾಳೆ ತಿಮ್ಮಪ್ಪನವರು, ಸೊರಬ ತಾಲ್ಲೂಕು.
5. ,, ಅರವಸೆ ಕೊಪ್ಪದ ರಾಮಪ್ಪನವರು, ನಗರ ತಾಲ್ಲೂಕು.

ಗೈರ್ ಹಾಜರು.

ಉದ್ಯೋಗತಃ ಮೆಂಬರುಗಳು.

1. ಮೆ॥ ಎ. ಆನಂದರಾಯರವರು, 1ನೇ ಅಸಿಸ್ಟೆಂಟ್ ಕಮಿಷನರವರು.
2. ,, ಜೆ. ಡಿ. ಚಿನ್ನಪ್ಪಾವುಪಿಳ್ಳೆ, ಹೊನ್ನಾಳಿ ತಾಲ್ಲೂಕು ಅಮಲ್ದಾರ್.

ಉದ್ಯೋಗಸ್ಥರಲ್ಲದ ಮೆಂಬರುಗಳು.

1. ಮೆ॥ ಜವಳಿ ಮಂಜಪ್ಪನವರು, ತೀರ್ಥಹಳ್ಳಿ ತಾಲ್ಲೂಕು.
2. ಇನಾಂದಾರ್ ಮೆಂಬರ್ (ಖಾಲಿ).

1. ಡಿಸ್ಟ್ರಿಕ್ಟ್ ಫಂಡು ಲೆಕ್ಕಗಳು.—ಕಂಟ್ರೋಲರವರಿಂದ ಪ್ಯಾಸಾಗಿ ಬಂದ 1903ನೇ ಇಸವಿ ಫಿಬ್ರವರಿ ಮತ್ತು ಮಾರ್ಚ್ ತಿಂಗಳುಗಳ ಡಿಸ್ಟ್ರಿಕ್ಟ್ ಫಂಡು ಜವಾಬಿಚ್ಚುಲೆಕ್ಕಗಳನ್ನು ಓದಿ ರಿಕಾರ್ಡು ಮಾಡಲಾಯಿತು.

2. ಇನ್‌ಸ್ಪೆಕ್ಷನ್ ಲಾಡ್ಜ್‌ಗಳನ್ನು 3ನೇ ಕ್ಲಾಸು ಮುಸಾಫರ್ ಬಂಗ್ಲೆಯಾಗಿ ಮಾಡೋಣ :—ಪ್ರಯಾಣಸ್ಥರಿಗೆ ಅತ್ಯವಶ್ಯಕವಾಗಿ ಬೇಕಾದ ಎಲ್ಲಾ ಇನ್‌ಸ್ಪೆಕ್ಷನ್ ಲಾಡ್ಜ್‌ಗಳನ್ನು ಮೂರನೇ ಕ್ಲಾಸ್ ಬಂಗ್ಲೆಗಳನ್ನಾಗಿ ಮಾಡಿ 1903ನೇ ಇಸವಿ ಜುಲೈ ಗುರ್ರೇ ಲಾಗಾಯಿತು ರೆವಿನ್ಯೂ ಇಲಾಖೆಗೆ ವರ್ಗಾಯಿಸಿ ಇವುಗಳ ಮೇಲ್ವಿಚಾರಣೆ ಮತ್ತು ನಿಗೆವಾನಿ ಡಿಸ್ಟ್ರಿಕ್ಟ್ ಫಂಡ್ಸಿನಿಂದ ನಡಿಸುತ್ತಾ ಬರಬೇಕಲ್ಲದೆ ಬೋರ್ಡಿನವರ ಮಂಜೂರಾತಿಯಿಂದ ಇಂಥಾ ಅವಶ್ಯಕವಾದ ಕಟ್ಟಡಗಳ ಬಂದು ಪಟ್ಟಿಯನ್ನು ಕಳುಹಿಸಿಕೊಡಬೇಕೆಂಬದಾಗಿ ಬಂದ 1903ನೇ ಇಸವಿ ಮೇ 13ನೇ ಮುಕ್ಕಂ ನಂಬರು 16042—53 ಎಲ್. ಎಫ್. 69—97ನೇ ಗವರ್ನ್‌ಮೆಂಟ್ ಪ್ರೊಸಿಡಿಂಗ್ಸು ಓದಲಾಗಿ ಹೊರೋಗೊಪ್ಪ, ಪುಳವಿ, ಆನವಟ್ಟಿ ಮತ್ತು ಹುಂಚದ ಕಟ್ಟೆಯಲ್ಲಿ ಇರತಕ್ಕ ಇನ್‌ಸ್ಪೆಕ್ಷನ್ ಲಾಡ್ಜ್‌ಗಳು ಪ್ರಯಾಣಸ್ಥರ ಅನುಕೂಲತೆಗೆ ಅವಶ್ಯವಾದವುಗಳೆಂತಲೂ ಇವುಗಳನ್ನು ರೆವಿನ್ಯು ಇಲಾಖೆ ಸುಪರ್ದಿಗೆ ತೆಗದುಕೊಂಡು 3ನೇ ಕ್ಲಾಸ್ ಬಂಗ್ಲೆಗಳನ್ನಾಗಿ ಮಾಡಬಹುದೆಂತಲೂ ಬೋರ್ಡಿನವರು ತೀರ್ಮಾನಿಸಿದರು.

3. ಘವತಿ ಆದ ಲೋಕಲ್‌ಫಂಡ್ ಇಲಾಖೆ ಜವಾನ ಹನುಮಂತನ ಸರ್ವಿಸು ವಿಷಯ :—1902ನೇ ಇಸವಿ ನವಂಬರ್ 21ನೇ ಮುಕ್ಕಂ ನಂಬರು 8772—3 ಪಿ. ಎ. ಗೌರ್ನ್‌ಮೆಂಟ್ ಪ್ರೊಸಿಡಿಂಗ್ಸಿನಲ್ಲಿ ನಮೂದಿರುವ ಗತಿಸಿದ ಲೋಕಲ್ ಫಂಡು ಇಲಾಖಾ ಜವಾನ ಹನುಮಂತನ ಸರ್ವಿಸು ವಿಚಾರದಲ್ಲಿ ಬಂದ ರೆವಿನ್ಯು ಮತ್ತು ಜನರಲ್ ಸೆಕ್ರೆಟರಿ ಯವರ 1903ನೇ ಮೇ 23ನೇ ಮುಕ್ಕಂ ನಂಬರು 16712 ಪಿ. ಎ. 1552ನೇ ಡಾಕೀಟು ಆಖೈರಾಗಿ ವುಳ್ಳ ಕಾಗದ ಪತ್ರಗಳು ಓದಲಾಗಿ ಪ್ಲೇಗ್ ಕ್ಯಾಂಪಿನಲ್ಲಿ ಕೆಲಸ ಮಾಡುತ್ತಾ ಇದ್ದು ಪ್ಲೇಗಿನಿಂದ ಮೃತಪಟ್ಟ ಲೋಕಲ್ ಫಂಡು ಇಲಾಖಾ ಜವಾನ ಹನುಮಂತನ ಹೆಂಡತಿಗೆ ಲೋಕಲ್ ಸರ್ವಿಸ್ ರೆಗ್ಯುಲೇಷನ್ನಿನ 1ನೇ ನಕ್ಷರ್ 372 (*a*) (*ii*) ಮತ್ತು 374ನೇ ಆರ್ಟಿಕಲ್ಲನುಸರಿಸಿ, ಎಕ್ಸ್‌ಗ್ರೇಷಿಯೊ ಪೆರ್ಷನ್ ಕೊಡಲು ಯೋಚಿಸುವ ಭಾಗ್ಯ ಬಲ್ಲದಾಗುಕ್ತವಾದ ವಿಷಯವಾಗಿರುತ್ತದೆಂತಲೂ ಈ ಪೆರ್ಷನ್ ಛಾರ್ಜ್ ಡಿಸ್ಟ್ರಿಕ್ಟ್ ಫಂಡ್ಸು ಬಾಬಿಗೆ ನ್ಯಾಯವಾಗಿ ಖರ್ಚು ಬೀಳತಕ್ಕದ್ದಲ್ಲವಾಗಿ ಕಂಡುಬರುತ್ತದೆಂತಲೂ, ಆದರೂ ಈ ಛಾರ್ಜ್ ಯಾವ ಫಂಡಿನಿಂದ ಕೊಡಲ್ಪಡತಕ್ಕದೆಂಬದನ್ನು ಗೌರ್ನ್‌ಮೆಂಟಿನವರೇ ನಿರ್ಣಯ ಮಾಡತಕ್ಕದ್ದಾಗಿ ಇರುತ್ತದೆಂತ ಬೋರ್ಡಿನವರು ತೀರ್ಮಾನ ಮಾಡಿದರು.

4. ಸೂಳೆಕೆರೆ—ಡಾವಣಗೆರೆ ರಸ್ತೆ ಮತ್ತು ಈರನಕಣವೆ—ಬಸವನಕಣವೆ ರಸ್ತೆಗೆ ಮೈಲೇಜು ದರ ಹೆಚ್ಚಿಸುವ ವಿಚಾರ :—ಚನ್ನಗಿರಿ ತಾಲ್ಲೂಕು ಈರನಕಣಿವೆ—ಬಸವನಕಣಿವೆ ರಸ್ತೆಗೆ ಸಾಲಾಬಾದು ಕಾಮುಗಾರಿ ಮೈಲೇಜು ಗ್ರಾಂಟ್ ಹೆಚ್ಚಿಸುವ ವಿಚಾರ

ದಲ್ಲು ಮತ್ತು ಸೂಳಕೆರೆ–ಡಾವಣಗೆರೆ ರಸ್ತೆಯನ್ನು ಉತ್ತಮ ಸ್ಥಿತಿಗೆ ತರುವ ವಿಚಾರದಲ್ಲು ಬಂದ ಚವಎೊಗ್ಗ ಡಿವೀಜ್ಞ ಎಗ್ಜಿಕ್ಯೂಟಿವ್ ಇಂಜನಿಯರವರ ಮಾಹೆ ಮಜುಕೂರು 2ನೇ ಮುರ್ಕುಂ ನಂಬರು 412ನೇ ಡಾಕೀಟ್ ಆಖೈರಾಗಿ ವುಳ್ಳ ಕಾಗದ ಪತ್ರಗಳು ಓದಲಾಗಿ ಸದರಿ ರಸ್ತೆಗೆ ದರ ವೈಲಿ 1ಕ್ಕೆ ಹಾಲಿ ಇರುವ 30—0—0 ರೂಪಾಯಿನ ಅಲಾಟ್ಮೆಂಟನ್ನು 50—0—0 ರೂಪಾಯಿಗೆ ಹೆಚ್ಚಿಸಬಹುದೆಂತ ಬೋರ್ಡಿನವರು ತೀರ್ಮಾನಿಸಿದ್ದಲ್ಲದೆ ಡಾವಣಗೆರೆಗೆ ಹೋಗಲು ಸೂಳಕೆರೆಯಿಂದ ಡಾವಣಗೆರೆ ತಾಲ್ಲೋಕು ಹದ ಡಿಗೆ ಹೋಗಿ ಸೇರುವ ರಸ್ತೆಯನ್ನು ಪೂರೈಸಲೂ ಬಂದು ಅಂದಾಜಾವನ್ನು ತಯಾರ್ಮಾಡಿಸುವ ವಿಚಾರದಲ್ಲಿ ಎಗ್ಜಿಕ್ಯೂಟಿವ್ ಇಂಜಿನಿಯರವರನ್ನು ಕೇಳಿಕೊಳ್ಳಬೇಕಾಗಿಯು ತೀರ್ಮಾನಿಸಿದರು.

5. ಬರುವ ದಸರಾ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳನ್ನು ಚುನಾಯಿಸುವದು :—ಈ ವರುಷದ ದಸರಾ ಪ್ರಜಾ ಪ್ರತಿನಿಧಿ ಸಭೆಗೆ ಬೋರ್ಡಿನ ಪರವಾಗಿ ಮೆ॥ ನಾಡಿಗ ಗೋಪಾಲಪ್ಪನವರು ಮತ್ತು ಅರಮನೆ ಕೊಪ್ಪದ ರಾಮಪ್ಪನವರು ಚುನಾಯಿಸಲ್ಪಡ ತಕ್ಕದ್ದೆಂದು ಬೋರ್ಡಿನಲ್ಲಿ ತೀರ್ಮಾನವಾಯಿತು. ಈ ದೊಡ್ಡ ಮನುಷ್ಯರು ತಮ್ಮ ನೇಮಣೂಕವನ್ನು ಅಂಗೀಕರಿಸಿ ಇರುತ್ತಾರೆ.

6. ಕೊಡಶಾದ್ರಿ ಪರ್ವತದ ಮೇಲಿನ 3 ಕೊಣಗಳ ರಿಪೇರಿ :—ಕೊಡಶಾದ್ರಿ ಪರ್ವತದ ಮೇಲೆ ಇರುವ ಮೂರು ಕೊಣಗಳು ರಿಪೇರಿಗಾಗಿ 528—0—0 ರೂಪಾಯಿನ ಅಂದಾಜು ಮತ್ತು ಸಾಗರ ತಾಲ್ಲೋಕು ಅಮಲ್ದಾರ್ 1903ನೇ ಇಸವಿ ಮೇ 6ನೇ ಮುರ್ಕುಂ 990—1574ನೇ ನಂಬರು ರಿಪೋರ್ಟನೊಡನೆ ಬಂದ ಸಾಗರ ಸಬ್ ಡಿವೀಜ್ಞ ಛಾರ್ಜಿನಲ್ಲಿ ಇರುವ ಅಸಿಸ್ಟೆಂಟ್ ಕಮಿಷನರವರ 1903ನೇ ಇಸವಿ ಮೇ 13ನೇ ಮುರ್ಕುಂ 905—557ನೇ ನಂಬರು ಯಾದಾಸ್ತು ಓದಲಾಗಿ ಪರ್ವತದ ಮೇಲೆ ಇರುವ ಕಾವುಸರೋವರ ಮತ್ತು ಹುಲಿದೇವರ ದೇವಸ್ಥಾನದ ಸಮೀಪದಲ್ಲಿರುವ ಕೊಣವನ್ನು ಸಹಾ ರಿಪೇರಿ ಮಾಡುವದಕ್ಕಾಗಿ (465–0–0) ರೂಪಾಯಿನ ಅಂದಾಜು ಮಂಜೂರ್ಮಾಡಬಹುದಾಗಿ ಬೋರ್ಡಿನವರು ತೀರ್ಮಾನಿಸಿದರು.

7. ನ್ಯಾಮತಿ–ಸುರಹೊನ್ನೆ ರಸ್ತೆ :—ನ್ಯಾಮತಿ–ಸುರಹೊನ್ನೆ ರಸ್ತೆಯನ್ನು ಉತ್ತಮ ಸ್ಥಿತಿಗೆ ತರಲೂ ಇದಕ್ಕೆ ತಗಲುವ ಛಾರ್ಜಿನಲ್ಲಿ ಅರ್ಧ ಛಾರ್ಜನ್ನು ಲೋಕಲ್ ಫಂಡ್ಸಿನಿಂದ ಕೊಡಬೇಕೆಂಬುವ ವಿಚಾರದಲ್ಲಿ ಬಂದ ಹೊನ್ನಾಳಿ ತಾಲ್ಲೋಕು ಅಮಲ್ದಾರ್ 1903ನೇ ಮೇ 13ನೇ ಮುರ್ಕುಂ ನಂಬರು 251—1873ನೇ ರಿಪೋರ್ಟು ಓದಲಾಗಿ ಈ ರಸ್ತೆ ಸರಿಮಾಡುವದಕ್ಕಾಗಿ ತಗಲುವ ಲಾಗವಡಿನಲ್ಲಿ ಅರ್ಧ ಲಾಗವಡನ್ನು ಲೋಕಲ್ ಫಂಡ್ಸಿನಿಂದ ಕೊಡಲೂ ಬೋರ್ಡಿನವರು ಒಪ್ಪಿಕೊಂಡರು.

8. ನ್ಯಾಮತಿ ಹಂಗಾಮಿ ಆಸಪತ್ರೆ :—ಆಸಪತ್ರೆ ಲವಾಜಮಾ ಖರ್ಚಿನಲ್ಲಿ $\frac{2}{3}$ನೇ ಭಾಗದ ಖರ್ಚನ್ನು ಲೋಕಲ್ ಫಂಡ್ಸಿನಿಂದ ಕೊಡತಕ್ಕದ್ದಾಗಿ ಇರುತ್ತದೆಂದು ವಿಧಾಯಕವಾಗಿ ಇರುವ ಪೂರ್ವದ ಚೀಫ್ ಕಮಿಷ್ಶನರ್ ಸಾಹೇಬರವರ 1875ನೇ ಇಸವಿ ಅಕ್ಟೋಬರ್ 26ನೇ ಮುರ್ಕುಂ ನಂಬರು 6123—ಜನರಲ್ 141ನೇ ಪ್ರೊಸಿಡಿಂಗ್ಸಿನ 6ನೇ ಪ್ಯಾರಾಕ್ಕೆ ಗಮನಕೊಟ್ಟು ಅದರಲ್ಲಿ ನಮೂದಿಸಿರುವಂತೆ ಅರ್ಧ ಖರ್ಚಿಗೆ ಬದಲಾಗಿ $\frac{2}{3}$ನೇ ಭಾಗದ ಈ ಹಂಗಾಮಿ ಆಸ್ಪತ್ರೆಯ ಖರ್ಚನ್ನು ಲೋಕಲ್ ಫಂಡ್ಸಿನಿಂದ ವಹಿಸುವ ವಿಚಾರದಲ್ಲಿ ಈ ಅಂಶವನ್ನು ಬೋರ್ಡಿನವರ ಮುಂದೆ ಇಟ್ಟು ಅವರ ತೀರ್ಮಾನವನ್ನು ತಿಳಿಯಪಡಿಸಬೇಕೆಂಬುವ ವಿಚಾರದಲ್ಲಿ ಬಂದ ಜನರಲ್ ಮತ್ತು ರೆವಿನ್ಯು ಸೆಕ್ರೆಟರಿಯವರ ಮಾಹೆ ಮಜಕೂರು 25ನೇ ಮುರ್ಕುಂ 18130 ಎಲ್. ಎಫ್. 140—02ನೇ ನಂಬರು ಡಾಕೀಟ್ ಓದಲಾಗಿ ಈ ನ್ಯಾಮತಿ ಹಂಗಾಮಿ ಆಸ್ಪತ್ರೆಯ ಖರ್ಚಿನಲ್ಲಿ $\frac{2}{3}$ನೇ ಭಾಗ ಖರ್ಚನ್ನು ಲೋಕಲ್ ಫಂಡ್ಸಿನಿಂದ ವಹಿಸಲೂ ಬೋರ್ಡಿನವರು ಪೊಪ್ಪಿಕೊಂಡರು.

9. ವುಳವಿ ಇನ್ಸ್ಪೆಕ್ಷನ್ ಲಾಡ್ಜ್ ಕೇರಟೇಕರನಿಗೆ ಅಲೋಯನ್ಸು :—ಡಿಸ್ಟ್ರಿಕ್ಟು ಫಂಡ್ಸಿನಿಂದ ಹೊಸದಾಗಿ ರಿಪೇರಿಯಾಗಿ ಇರತಕ್ಕ ವುಳವಿಯಲ್ಲಿ ಇರುವ ಮುಸಾಫರಖಾನೆ ಯಾನೆ ಛತ್ರದ ನಿಗೇವಾನಿ ಮತ್ತು ಇದನ್ನು ಶುಚಿಯಾಗಿ ಇಟ್ಟುಕೊಂಡಿರಲೂ ವುಳವಿಯಲ್ಲಿ ಇರುವ ಇನ್ಸ್ಪೆಕ್ಷನ್ ಲಾಡ್ಜ್ ಕೇರಟೇಕರನಿಗೆ ಮಾಹೇಯಾನಾ ಎರಡು ರೂಪಾಯಿನ ಅಲೋಯನ್ಸನ್ನು ಕೊಡುತ್ತಾ ಬರಬೇಕೆಂಬದಾಗಿ ಸಾಗರದ ಸಬ್ ಡಿವಿಜ್ಞ ಚಾರ್ಜಿನಲ್ಲಿ ಇರುವ ಅಸಿಸ್ಟೆಂಟ್ ಕಮಿಷನರವರು ಅಭಿಪ್ರಾಯ ಪಟ್ಟದ್ದನ್ನು ಎಗ್ಜಿಕ್ಯೂಟಿವ್ ಇಂಜಿನಿಯರವರು ಅನುಮೋದಿಸಿದ್ದರ ಮೇಲೆ ಈ ವುಳವಿ ಇನ್ಸ್ಪೆಕ್ಷನ್ ಲಾಡ್ಜ್ ಕೇರಟೇಕರನಿಗೆ ಮಾಹೆಯಾನಾ ಎರಡು ರೂಪಾಯಿನ ಅಲೋಯನ್ಸನ್ನು ಕೊಡುವದು ಮಂಜೂರು ಮಾಡಬಹುದಾಗಿ ಬೋರ್ಡಿನವರು ತೀರ್ಮಾನಿಸಿದರು.

ಕೆ. ಪಿ. ಪುಟ್ಟಣ್ಣಶೆಟ್ಟಿ,
ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಫಂಡ್ ಬೋರ್ಡು.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ಯ 1902—1903ನೇ ಇಸವಿ ಆರ್ಜೀ ನಂಬರ್ 403.

ಅರ್ಜೀದಾರ್ ಬೆಂಗಳೂರು ಇಂಪೀರಿಯಲ್ ರಿಜಿಮೆಂಟ್ B ಸ್ಕ್ವಾಡ್ರನ್ ಲ್ಯಾನ್ಸ್ ದಪೇದಾರ್ ಕಾಶೀರಾವು ಖದಂ, ಮೈನರಾದ ಬೆಂಗಳೂರು ಸ್ಥಳದ ರಾವ್‌ಸಾಬ್ ಖದಂ ಯವರ ಪುಕ್ಕಳು 1ನೇ ಗಾಥರಾವು ಖದಂ, 2ನೇ ವಿಶ್ವನಾಥರಾವು ಖದಂ, 3ನೇ ಚಿದಂಬರ ರಾವು ಖದಂ ಯವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಗಾಥರಾವು ಖದಂ, ವಿಶ್ವನಾಥರಾವು ಖದಂ, ಚಿದಂಬರರಾವು ಖದಂ ಯವರಿಗೆ ಆಂಣನು ಆಗಬೇಕೆಂಬ ಹಕ್ಕಿನ ಮೇಲೆ ಬೆಂಗಳೂರು ಸ್ಥಳದ ಕಾಶೀರಾವು ಖದಂ ಯವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಗೆ ಅಜೀಸ್ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸ್ಯ 1903ನೇ ಇಸವಿ ಆಗಸ್ಟ್ ತಾರೀಖು 14ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸ್ಯ 1903ನೇ ಇಸವಿ ಜುಲೈ ತಿಂಗಳು 10ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಂ. ರಾಮಸ್ವಾಮಯ್ಯರ್, ಡಿಸ್ಟ್ರಿಕ್ಟ್ ಜಡ್ಜ್.